

ಬೆಟ್ಟಗಳ ನಡುವಿನ ತಿಳಿನೀರ ಸಾಗರದಲ್ಲಿ ಸುಂದರ ಯಾನ

ಪ್ರವಾಸಿಗರು ಅರ್ಧ ದಿನದ ಅಥವಾ ಒಂದೆರಡು ದಿನಗಳ ಪ್ಯಾಕೇಜುಗಳನ್ನು ಪಡೆಯಬಹುದು. ಕತ್ತಲಾಗುತ್ತಿದ್ದಂತೆ ದ್ವೀಪಗಳ ಸುತ್ತ ಕಪ್ಪು ಹೆಪ್ಪುಗಟ್ಟಿದರೂ ಇಲ್ಲಿ ಬೀಡುಬಿಟ್ಟ ಕ್ರೂಸ್‌ಗಳಿಂದ ಬರುವ ದೀಪದ ಬೆಳಕು ಮತ್ತೊಂದು ಸುಂದರ ಲೋಕವನ್ನೇ ಸೃಷ್ಟಿಸಿ ಚಮತ್ಕಾರ ತೋರಿಬಿಡುತ್ತವೆ.

## ‘ವಿಸ್ಮಯಕಾರಿ ಗುಹೆ’ ಸಂಗ್‌ಸಾಟ್

ಈ ಪ್ರಾಂತ್ಯದಲ್ಲೇ ಅತ್ಯಂತ ದೊಡ್ಡ ಹಾಗೂ ಪ್ರವಾಸಿಗರ ಮೆಚ್ಚಿನ ತಾಣ ಸಂಗ್‌ಸಾಟ್ ಗುಹೆ. ಈ ಗುಹೆಯು ಬೋ ಹಾನ್ ದ್ವೀಪದಲ್ಲಿದೆ. ಕ್ರೂಸ್‌ನಲ್ಲಿ ಹಲೋಂಗ್ ಬೇಯಲ್ಲಿ ಸುತ್ತಾಡಿಕೊಂಡಿರುವವರು ಬೇರೊಂದು ಚಿಕ್ಕ ಬೋಟಿನಲ್ಲಿ ಈ ದ್ವೀಪದತ್ತ ಪಯಣಿಸಬೇಕು. ಸಮುದ್ರ ತಟದಿಂದ ಸುಮಾರು 25 ಮೀಟರ್ ಎತ್ತರದಲ್ಲಿರುವ ಈ ಗುಹೆ ತಲುಪಲು ಸುಮಾರು 100 ಮೆಟ್ಟಿಲನ್ನಾದರೂ ಹತ್ತಬೇಕು. ಮೆಟ್ಟಿಲು ಹತ್ತುವಾಗಲೇ ಮಧ್ಯೆ ಮಧ್ಯೆ ನಿಂತು ಪ್ರಶಾಂತವಾದ ನೀಲಿ ಸಮುದ್ರ, ಮಧ್ಯೆ ಹಸುರು ಗೋಪುರಗಳಂತೆ ನಿಂತಿರುವ ಉಳಿದ ದ್ವೀಪಗಳ ಸೌಂದರ್ಯವನ್ನು ಸವಿಯಬಹುದು.

ಗುಹೆಯಲ್ಲಿ ಎರಡು ಕೊಠಡಿಗಳಿವೆ. ಮೊದಲ ಕೊಠಡಿಯು ವರ್ತುಲಾಕಾರದ ರಂಗಸ್ಥಳದ ಮಾದರಿಯಲ್ಲಿದ್ದು, ಇದನ್ನು ‘ವೇಟಿಂಗ್ ಚೇಂಬರ್’ (ಕಾಯುವ ಕೊಠಡಿ) ಎನ್ನುತ್ತಾರೆ. ಇದು ಸಾಕಷ್ಟು ವಿಶಾಲವಾಗಿದ್ದು, ಇದರ ಒಳಪದರಗಳು ಚಿತ್ರ, ವಿಚಿತ್ರಾಕಾರದಲ್ಲಿವೆ. ಈ ಪ್ರಕೃತಿಸಹಜ ಅಲಂಕಾರಕ್ಕೆ ಪ್ರವಾಸಿಗರನ್ನು ಬೆರಗಾಗಿಸುವ ಚೆಲುವಿದೆ. ಮೊದಲ ಕೊಠಡಿಯಿಂದ ಎರಡನೆಯ ಕೊಠಡಿಗೆ ಕಿರಿದಾದ ಮೆಟ್ಟಿಲುಗಳ ದಾರಿ ಇದೆ. ಎರಡನೆಯ ಕೊಠಡಿ ಸೆರೇನ್ ಕ್ಯಾಸಲ್ (ಪ್ರಶಾಂತ ಕೋಟೆ). ಇದು ಇನ್ನೂ ವಿಶಾಲವಾಗಿದ್ದು, ಇದರ ಮುಚ್ಚಿಗೆ ಎತ್ತರದಲ್ಲಿದೆ. ಇಲ್ಲೂ ಒಳಪದರದಲ್ಲಿ ಏರ್ಪಟ್ಟ ಸುಣ್ಣದ ಕಲ್ಲಿನ ನೈಸರ್ಗಿಕ ಅಲಂಕಾರ ಅತ್ಯದ್ಭುತ.

ಮಧ್ಯದಲ್ಲಿ ಪ್ರವಾಸಿಗರು ಸಾಗಲು ದಾರಿ ಇದ್ದು, ಬಣ್ಣಬಣ್ಣದ ಬೆಳಕಿನ ವ್ಯವಸ್ಥೆ ಮಾಡಲಾಗಿದೆ. ಗುಹೆಯ ಒಳಪದರಗಳು ನೋಡುಗರಿಗೆ ಪ್ರಾಣಿಯೋ, ಪಕ್ಷಿಯೋ ಇಲ್ಲ ಮತ್ತೇನೋ ಆಕಾರವಾಗಿ ಕಾಣುತ್ತವೆ. ಒಂದು ಕಡೆ ಬಂಡೆಯ ಪದರು ಕುದುರೆಯಾಕಾರದಲ್ಲಿದ್ದರೆ, ಮತ್ತೊಂದು ಕಡೆ ದೊಡ್ಡ ಕತ್ತಿಯ ಆಕಾರದಲ್ಲಿದೆ. ಕೆಲವು ಕಡೆ ಬಂಡೆ ಧಾರೆಧಾರೆಯಾಗಿ ಹರಿಯುವ ನೀರಿನಂತಿದ್ದರೆ, ಕೆಲವು ಕಡೆ ಉಕ್ಕಿ ಹರಿಯುವ ಲಾವಾದಂತಿದೆ. ಒಂದೆಡೆ, ಇಳಿಬಿಟ್ಟ ಮನುಷ್ಯನ ಕಾಲಿನಂತೆ ಕಂಡು ಅಬ್ಬಾ ಎನಿಸುತ್ತದೆ.

ಸಂಗ್‌ಸಾಟ್ ಗುಹೆಯನ್ನು ಕಂಡುಹಿಡಿದ ಕೀರ್ತಿ ಫ್ರೆಂಚ್ ಪ್ರವಾಸಿಗನದ್ದು. 1901ರಲ್ಲಿ, ವಿಯೆಟ್ನಾಂ ಫ್ರೆಂಚ್ ಆಡಳಿತಕ್ಕೆ ಒಳಪಟ್ಟಿದ್ದ ಆ ಸಮಯದಲ್ಲಿ ಇಲ್ಲಿಗೆ ಬಂದಿದ್ದ ಆತ ಈ ಬೆಟ್ಟಗಳ ಸೌಂದರ್ಯಕ್ಕೆ ನಿಬ್ಬೆರಗಾಗಿ, ‘ಗ್ರಾಟ್ಟೆ ಡೆಸ್ ಸರ್ಪ್ರೈಸಸ್’ ಎಂದ. (ವಿಸ್ಮಯಕಾರಿ ಗುಹೆ). ಆದರೆ ಗುಹೆಯು ಪ್ರವಾಸಿಗರಿಗಾಗಿ ತೆರೆದುಕೊಂಡಿದ್ದು 1993ರಲ್ಲಿ.

## ‘ಸ್ವರ್ಗದ ಬಾಗಿಲು’ ಲುವಾನ್ ಕೇವ್

ಬೊ ಹಾನ್ ದ್ವೀಪದಲ್ಲಿರುವ ಲುವಾನ್ ಕೇವ್, ಮತ್ತೊಂದು ಅದ್ಭುತ ಸ್ಥಳ. ಲುವಾನ್ ಕೇವ್‌ನ ಎದುರಲ್ಲಿ ‘ಟರ್ಟಲ್ ಐಲ್ಯಾಂಡ್’, ಬಲಭಾಗದಲ್ಲಿ ‘ದಿ ಹೆವನ್ ಗೇಟ್’ ಇದೆ. ಲುವಾನ್ ಕೇವ್ ಸುಮಾರು 100 ಮೀಟರ್ ಉದ್ದ, 4 ಮೀಟರ್ ಅಗಲ ಮತ್ತು 3 ಮೀಟರ್ ಎತ್ತರವಿದೆ. ಮಧ್ಯ ಭಾಗದಲ್ಲಿರುವ ಸಣ್ಣ ದ್ವಾರವೇ ಈ ಗುಹೆಯ ವೈಶಿಷ್ಟ್ಯ. ಇದೇ ಸ್ವರ್ಗದ ಬಾಗಿಲು. ಈ ದ್ವಾರದಿಂದ ಒಂದೇ ಬಾರಿ ಎರಡು ಮಧ್ಯಮ ಗಾತ್ರದ ಬೋಟುಗಳು ಸಾಗಬಹುದು. ಈ ದ್ವಾರದಲ್ಲಿ ಸಾಗಿ ಲುವಾನ್ ಕೇವನ್ನು ದಾಟಿದಾಗ ಅತ್ಯಂತ ಪ್ರಶಾಂತ, ತಿಳಿ ಹಸುರು ಬಣ್ಣದ ಸರೋವರ ಸ್ವಾಗತಿಸುತ್ತದೆ.

ಸರೋವರವನ್ನು ಸುತ್ತುವರಿದ ಸುಣ್ಣದ ಕಲ್ಲಿನ ಬೆಟ್ಟಗಳು ಪ್ರಕೃತಿ ಸೌಂದರ್ಯವನ್ನು ಇಮ್ಮಡಿಗೊಳಿಸಿವೆ. ಈ ಬೆಟ್ಟಗಳ ಮೇಲೆ ಮರಗಳು, ಹೂಗಿಡಗಳು, ಕುರುಚಲು ಗಿಡಗಳಿವೆ. ತಿಳಿಯಾದ ಸರೋವರದಲ್ಲಿ ಕಾಣುವ ನೀಲಿ ಆಕಾಶ, ದಟ್ಟ ಮೋಡಗಳು, ಸುತ್ತಲಿನ ಬೆಟ್ಟಗಳ ಬಿಂಬ ನೋಡುಗರ ಮನದಲ್ಲಿಯೂ ಚೆಲುವಿನ ಪ್ರತಿಬಿಂಬವನ್ನು ಹಾಗೇ ಉಳಿಸಿಬಿಡುತ್ತವೆ.

ಹಲೋಂಗ್ ಬೇ ಪ್ರಮುಖ ಆಕರ್ಷಣೆಯೇ ಈ ಬೆಟ್ಟಗಳಾಗಿರುವುದರಿಂದ, ಇಲ್ಲಿಗೆ ಬರುವ ಪ್ರವಾಸಿಗರಿಗಾಗಿ, ಹುಟ್ಟು ಹಾಕಿಕೊಂಡು ಬರುವ ಸಣ್ಣ ಗಾತ್ರದ ದೋಣಿಗಳು, ಯಾಂತ್ರಿಕ ದೋಣಿಗಳು ಸಾಕಷ್ಟಿರುತ್ತವೆ.

## ಮೆರುಗಿನ ‘ಟೀ ಟಾಪ್’ ಐಲ್ಯಾಂಡ್

ಅರ್ಧಚಂದ್ರಾಕಾರದಲ್ಲಿನ ಸಮುದ್ರ ತೀರ ಈ ದ್ವೀಪದ ಪ್ರಮುಖ ಆಕರ್ಷಣೆ. ನೀಲಿ ಸಮುದ್ರ, ಬಿಳಿ ಮರಳ ತೀರ, ಹಚ್ಚ ಹಸುರಿನ ಎತ್ತರದ ಬೆಟ್ಟ, ಬೆಟ್ಟದ ತುದಿಯಲ್ಲೊಂದು ಮಂಟಪ ಈ ಟೀ ಟಾಪ್ ದ್ವೀಪಕ್ಕೆ ಮೆರುಗನ್ನು ಉಡುಗೊರೆಯಾಗಿ ನೀಡಿವೆ. ರಷ್ಯನ್ ಗಗನಯಾತ್ರಿ ಗರ್ಮನ್ ಟಿಟೊವ್ ಇಲ್ಲಿಗೆ ಭೇಟಿ ಕೊಟ್ಟ ಗೌರವಾರ್ಥ ಅವರ ಹೆಸರನ್ನೇ ದ್ವೀಪಕ್ಕಿಡಲಾಗಿದೆ. ‘ಟೀ ಟಾಪ್’ ದ್ವೀಪಕ್ಕೆ ಕಾಲಿಡುತ್ತಿದ್ದಂತೆ ಆಳೆತ್ತರದ ಟಿಟೊವ್ ಮೂರ್ತಿ ಸ್ವಾಗತಿಸುತ್ತದೆ. ಕಾಲು ಗಟ್ಟಿ ಇದ್ದರೆ ಬೆಟ್ಟವೇರಬಹುದು, ಇಲ್ಲಾ ತೀರದಲ್ಲಿ ಸುಮ್ಮನೆ ಅಡ್ಡಾಡಬಹುದು. ಮೆಟ್ಟಿಲುಗಳು ಕಡಿದಾಗಿದ್ದರೂ ಹಿಡಿದು ಹತ್ತಲು ಹಗ್ಗದ ವ್ಯವಸ್ಥೆ ಇದೆ.

ತುದಿ ತಲುಪಿದಾಗ ಮೇಲಿನಿಂದ ದಕ್ಕುವ ರಮ್ಯ ನೋಟ ಎಂದಿಗೂ ಮರೆಯಲಾಗದ್ದು. ಅಗಾಧ ಚೆಲುವನ್ನು ಬಗೆದಿಟ್ಟುಕೊಂಡಿರುವ ಈ ಕೊಲ್ಲಿಯ ಸೌಂದರ್ಯ ಎಂಥ ಅರಸಿಕರೆದೆಯಲ್ಲೂ ಲಹರಿ ಹರಿಸಬಲ್ಲದು.

ಪ್ರತಿಕ್ರಿಯಿಸಿ: feedback@sudha.co.in